ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬೆಂ.ನ.ವಿ/ಎಸ್‌ವೈಎನ್–ಅ.ಸಾ.ಸಭೆ/ 369 /2021–22 ದಿನಾಂಕ:28.03.2022

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು–560 001

ಮಾನ್ಯರೆ,

**ವಿಷಯ: ದಿನಾಂಕ 22.03.2022 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು**

****

ದಿನಾಂಕ **22.03.2022** ರದು ಪೂರ್ವಾಹ್ನ 11.30 ಗಂಟೆಗೆ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಾಮಾಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು– 560 001
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು– 560–001
3. ಕುಲಪತಿಗಳು, ಕುಲಸಚಿವರು, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ/ರಕ್ಷಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU**
**CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್/ಸಭೆ/೨೯೭ /2021-22 ದಿನಾಂಕ: 28.03.2022.

ದಿನಾಂಕ 22.03.2022 ರಂದು ಪೂರ್ವಾಹ್ನ 11.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ. ವಿ. ಆರ್. ದೇವರಾಜ್ | ಸದಸ್ಯರು |
| 3. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 4. | ಶ್ರೀ ಸಮರ್ಥ ಮುನಿರಾಜು | ಸದಸ್ಯರು |
| 5. | ಡಾ. ಶಿಂಟಿ ಆಂಟನಿ | ಸದಸ್ಯರು |
| 6. | ಶ್ರಿ. ಕೆ ಶಿವಣ್ಣ | ಸದಸ್ಯರು |
| 7. | ಡಾ. ಗುರುನಾಥರಾವ್ ವೈದ್ಯ | ಸದಸ್ಯರು |
| 8. | ಡಾ. ಅನೇಸಿಯಾ | ಸದಸ್ಯರು |
| 9. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 10. | ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 11. | ಡಾ. ಆರ್ ಕೆ ಚಂದ್ರನಾಥ್ | ಸದಸ್ಯರು |
| 12. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 13. | ಪ್ರೊ. ಬಿ. ರಮೇಶ್,<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 14. | ಶ್ರೀ ಸಿ ಎನ್ ಶ್ರೀಧರ, ಕೆ.ಎಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕಾರ್ಯ ಕಲಾಪಗಳನ್ನು ಪ್ರಾರಂಭಿಸಲು ಕುಲಪತಿಗಳ ಅನುಮತಿ ಕೋರಿದರು. ಅದರಂತೆ ಕುಲಪತಿಗಳು ಎಲ್ಲ ಸದಸ್ಯರನ್ನು ಸ್ವಾಗತಿಸಿ, ಘನತೆವೆತ್ತ ರಾಜ್ಯಪಾಲರು ಈ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವವನ್ನು ದಿನಾಂಕ 11.04.2022 ರಂದು ಆಯೋಜಿಸಲು ಅನುಮತಿ ನೀಡಿರುತ್ತಾರೆ ಎಂದು ಸಭೆಗೆ ತಿಳಿಸಿದರು. ಬಾಹ್ಯಾಕಾಶ ವಿಜ್ಞಾನಿ, ಪದ್ಮವಿಭೂಷಣ ಡಾ. ಕೆ. ಕಸ್ತೂರಿರಂಗನ್ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಘಟಿಕೋತ್ಸವ ಭಾಷಣ ನೀಡಲಿದ್ದಾರೆ. ಈ ಘಟಿಕೋತ್ಸವ ವಿಶ್ವವಿದ್ಯಾನಿಲಯದ ಪ್ರಮುಖ ಕಾರ್ಯಕ್ರಮವಾಗಿದ್ದು ಎಲ್ಲ ಸದಸ್ಯರ ಸಹಕಾರದಿಂದ ಈ ಸಮಾರಂಭವನ್ನು ಯಶಸ್ವಿಗೊಳಿಸುವ ವಿಶ್ವಾಸ ಹೊಂದಿರುವುದಾಗಿ ತಿಳಿಸಿದರು. ಇದಕ್ಕಾಗಿ ಒಂದು ಕೇಂದ್ರೀಯ ಸಮಿತಿ ರಚಿಸಲಾಗಿದೆ. ಇದಲ್ಲದೆ ವಿವಿಧ ಉಪಸಮಿತಿಗಳನ್ನು ಸಹ ರಚಿಸಲಾಗಿದ್ದು ಆಯಾ ಸಮಿತಿಗಳು ನಿರ್ವಹಿಸಬೇಕಾದ ಜವಾಬ್ದಾರಿ ಹಾಗೂ ಕರ್ತವ್ಯಗಳನ್ನು ವಿವರಿಸಲಾಗಿದೆ ಎಂದು ಹೇಳಿದರು. ನಂತರ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

---

**ವಿಷಯ ಸಂಖ್ಯೆ: 01:** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವದ ಖರ್ಚು ವೆಚ್ಚಗಳನ್ನು KTPP ಕಾಯ್ದೆಯ ಅನುಸಾರ ಕೈಗೊಳ್ಳುವ ಕುರಿತು.

***

*ಪರಾಮರ್ಶಕ ಟಿಪ್ಪಣಿ*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವವನ್ನು ದಿನಾಂಕ 11.04.2022ರಂದು ಆಯೋಜಿಸಲು ಘನತೆವೆತ್ತ ಕುಲಾಧಿಪತಿಗಳು ಅನುಮತಿ ನೀಡಿರುತ್ತಾರೆ. ವಿಶ್ವವಿದ್ಯಾನಿಲಯವು ಪೂರ್ವಸಿದ್ಧತೆಗಳನ್ನು ಆರಂಭಿಸಿದೆ.

ಘಟಿಕೋತ್ಸವದ ಆಯೋಜನೆಗೆ ಸಂಬಂದಿಸಿದಂತೆ ಜ್ಞಾನಜ್ಯೋತಿ ಸಭಾಂಗಣದ ವೇದಿಕೆ, LED Wall, ವೇದಿಕೆಯ ಆಸನ ವ್ಯವಸ್ಥೆ, ಸಭಾಂಗಣದ ಆಸನ ವ್ಯವಸ್ಥೆಗೆ ಪೂರಕ ಸಿದ್ಧತೆಗಳು, ಹೂವಿನ ಅಲಂಕಾರ, ಅಗತ್ಯ ಕಾರ್ಪೆಟ್ ಹೊದಿಕೆ, ಸಭಾಂಗಣದ ಹೊರಗಿನ ಮತ್ತು ಸುತ್ತಲಿನ ಪ್ರದೇಶದಲ್ಲಿ ಕಾರ್ಪೆಟ್ ಹೊರಾಂಗಣ ಸಿದ್ಧತೆಗಳು, ಅಲಂಕಾರಗಳು.

ಹವಾನಿಯಂತ್ರಿತ ವ್ಯವಸ್ಥೆ, ವಿವಿಐಪಿ(VVIP) Areasಗಳ ಸಿದ್ಧಪಡಿಸುವುದು, Media Lounge, Photography ಮತ್ತು Videography, Sound and Lighting ವ್ಯವಸ್ಥೆ, ಕ್ಯಾಂಪಸ್‌ನಲ್ಲಿನ ಹೊರಾಂಗಣದಲ್ಲಿನ Lighting ವ್ಯವಸ್ಥೆ, ಸಭಾಂಗಣದ ಹೊರಗೆ Lighting ವ್ಯವಸ್ಥೆ ಮತ್ತು ಸಭಾಂಗಣದ ಹೊರಗೆ Dining ವ್ಯವಸ್ಥೆಗಾಗಿ ಜರ್ಮನ್ ಟೆಂಟ್ ಮತ್ತು ಇತರೆ ವ್ಯವಸ್ಥೆಗಳು Printing and Fabrication Work, Generator ಮತ್ತಿತರ ಸೌಕರ್ಯಗಳನ್ನು ಮತ್ತು ಸೇವೆಗಳನ್ನು ಪಡೆದುಕೊಳ್ಳಲು ಕರ್ನಾಟಕ ಸರ್ಕಾರದ 4(G) ವಿನಾಯಿತಿಯಿರುವ M C & A ಮೂಲಕ ರೂ.25.00 ಲಕ್ಷಗಳಿಗೆ ಮೀರದಂತೆ ಪಡೆದುಕೊಳ್ಳಲು ಅನುಮೋದನೆಗಾಗಿ ಮಂಡಿಸಿದೆ.

ಮುಂದುವರೆದು, ಘಟಿಕೋತ್ಸವದಲ್ಲಿ ಭಾಗವಹಿಸುವವರಿಗೆ ಭೋಜನಾ ವ್ಯವಸ್ಥೆ ಮತ್ತು High Tea ವ್ಯವಸ್ಥೆಗಳನ್ನು ಮಾಡಲು ಅಗತ್ಯ ಖರ್ಚುಗಳನ್ನು ಮತ್ತು ಘಟಿಕೋತ್ಸವ ಸಮಾರಂಭದ ಸಿದ್ಧತೆಗಾಗಿ ತಗಲುವ ಇತರೆ ವೆಚ್ಚಗಳನ್ನು KTPP ನಿಯಮಾನುಸಾರ ಕೈಗೊಳ್ಳಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

*ವಿವರಣೆ:*

ಕುಲಸಚಿವರು (ಮೌಲ್ಯಮಾಪನ) ರವರು ಪ್ರಾಸ್ತಾವನೆಯ ವಿವರಗಳನ್ನು ಸಭೆಗೆ ವಿವರಿಸಿದರು ಸಮಾರಂಭಕ್ಕೆ ಅಗತ್ಯವಾದ ಪೂರ್ವ ಸಿದ್ಧತೆಗಳನ್ನು ಹಾಗೂ ಕಾರ್ಯಕ್ರಮದ ವ್ಯವಸ್ಥೆಯನ್ನು ವೃತ್ತಿಪರವಾಗಿ ನಿರ್ವಹಿಸಲು, ಇಂತಹ ಕಾರ್ಯಕ್ರಮಗಳ ಆಯೋಜನೆಯಲ್ಲಿ ಪರಿಣಿತಿ ಹೊಂದಿರುವ ಸಂಸ್ಥೆಗೆ ವಹಿಸಿದಲ್ಲಿ ಅಚ್ಚುಕಟ್ಟಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ. ಕಾರಣ ಕರ್ನಾಟಕ ಸರ್ಕಾರದ ಕೆ.ಟಿ.ಪಿ.ಪಿ ಕಾಯ್ದೆಯ 4(ಜಿ) ಅಡಿಯಲ್ಲಿ ವಿನಾಯಿತಿ ಪಡೆದ ಸಂಸ್ಥೆಗೆ ವಹಿಸಿದಲ್ಲಿ ಅತಿಥಿ ಸತ್ಕಾರದ ವೆಚ್ಚವನ್ನು ಸಹ ನಿಯಮಾನುಸಾರ ನಿರ್ವಹಿಸಲು ಸಭೆಯ ಅನುಮೋದನೆ ಕೋರಿದರು.

Social Media, Digital Platform ಗಳ ಮೂಲಕವೂ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದ ಪ್ರಚಾರ ನೀಡುವುದು ಅಗತ್ಯವಿದ್ದು, ಇದರಿಂದ ಹೊಸ ವಿಶ್ವವಿದ್ಯಾನಿಲಯದ ಐತಿಹಾಸಿಕವಾದ ಮೊದಲ ಮೈಲಿಗಲ್ಲು, ಶೈಕ್ಷಣಿಕ ವಲಯಗಳಲ್ಲಿ ತಿಳಿಯುವಂತಾಗುತ್ತದೆ ಎಂದು ಕುಲಪತಿಗಳು ಅಭಿಪ್ರಾಯಪಟ್ಟರು

ನಿರ್ಣಯ:

**ಪ್ರಸ್ತಾವನೆಯನ್ನು ಪರಿಗಣಿಸಿ, ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವ ಆಯೋಜಿಸಲು Social Media, Digital Platform ಗಳ ಮೂಲಕ ಪ್ರಚಾರವನ್ನು ನೀಡುವುದನ್ನು ಒಳಗೊಂಡಂತೆ ಅಗತ್ಯವಾದ ವ್ಯವಸ್ಥೆಗಳನ್ನು ಮಾಡಲು, ಕೆ.ಟಿ.ಪಿ.ಪಿ ಕಾಯ್ದೆಯ 4(ಜಿ) ವಿನಾಯಿತಿ ಪಡೆದಿರುವ ಸಂಸ್ಥೆಗೆ ವಹಿಸಲು ಹಾಗೂ ಈ ಕುರಿತು ನಿಯಮಾನುಸಾರ ಕ್ರಮವಹಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.**

**ಘಟಿಕೋತ್ಸವಕ್ಕಾಗಿ ಅಗತ್ಯವಾದ ಉಟೋಪಚಾರ, ಇನ್ನಿತರ ಸಾಂಧರ್ಭಿಕ ಮತ್ತು ಪೂರಕ ವೆಚ್ಚಗಳ ಕುರಿತಂತೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.**

**ವಿಷಯ ಸಂಖ್ಯೆ: 02** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಥಮ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಲು ಬೇಕಾಗಿರುವ ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸುವ ಕಾರ್ಯವನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ (MSIL) ಸಂಸ್ಥೆಯ ಮುಖಾಂತರ ಪಡೆದುಕೊಳ್ಳುವ ಬಗ್ಗೆ.

***

*ಪರಾಮರ್ಶಕ ಟಿಪ್ಪಣಿ*

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ನಡೆಸಬೇಕಾದ ಪ್ರಥಮ ವಾರ್ಷಿಕ ಘಟಿಕೋತ್ಸದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಬೇಕಾಗಿರುತ್ತದೆ.

ಈ ಸಂಬಂಧ ಕರ್ನಾಟಕ ರಾಜ್ಯ ಸರ್ಕಾರದ ಸಚಿವಾಲಯ ಪತ್ರ ಸಂಖ್ಯೆ: ಇಡಿ 323 ಯುಎನ್‌ಇ 2020 ದಿನಾಂಕ: 29.06.2016ರಲ್ಲಿ MSIL ಸಂಸ್ಥೆಯಿಂದ ಉತ್ಪಾದಿಸಿ ಪದವಿ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳಲು ಆದೇಶಿಸಿರುತ್ತಾರೆ.

ಆದುದರಿಂದ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಥಮ ವಾರ್ಷಿಕ ಘಟಿಕೋತ್ಸವದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ಅಗ್ಯವಾದ 40000 ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸುವ ಕಾರ್ಯವನ್ನು MSIL ಸಂಸ್ಥೆಗೆ ನೀಡುವ ಸಲುವಾಗಿ ಹಾಗೂ ಇದಕ್ಕೆ ತಗಲುವ 40,000 ಅಂದಾಜು ರೂ. 32,00,000/- + ಅನ್ವಯಿಕ ತೆರಿಗೆ ವೆಚ್ಚಗಳಿಗೆ ಅನುಮೋದನೆಗಾಗಿ ಸಿಂಡಿಕೇಟ್ ಸಭೆಗೆ ಪ್ರಸ್ತಾವನೆ ಮಂಡಿಸಲಾಗಿದೆ.

*ವಿವರಣೆ:*

ಕುಲಸಚಿವರು (ಮೌಲ್ಯಮಾಪನ) ರವರು ಪ್ರಾಸ್ತಾವನೆಯ ವಿವರಗಳನ್ನು ಹಾಗೂ ಸದಸ್ಯರು ಕೋರಿದ ಹೆಚ್ಚುವರಿ ಮಾಹಿತಿಯನ್ನು ಒದಗಿಸಿದರು ಎಂ.ಎಸ್.ಐ.ಎಲ್. ಸರ್ಕಾರಿ ಸಂಸ್ಥೆಯಾಗಿದ್ದು, ಈ ಸಂಸ್ಥೆ ವಿಶೇಷವಾದ ಭದ್ರತಾ ವೈಶಿಷ್ಟ್ಯಗಳು (Security Features) ಗಳನ್ನು ಹೊಂದಿದ್ದು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಈ ಸಂಸ್ಥೆಯಿಂದ ಪದವಿ ಪ್ರಮಾಣ ಪತ್ರಗಳನ್ನು ಖರೀದಿಸಬೇಕೆಂದು ಸರ್ಕಾರದ ಆದೇಶವಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

ನಿರ್ಣಯ:

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಲು ಬೇಕಾಗಿರುವ 40,000 ಪದವಿ ಪ್ರಮಾಣ ಪತ್ರಗಳನ್ನು ಅಗತ್ಯ Security Features ಗಳೊಂದಿಗೆ ಪಡೆದುಕೊಳ್ಳಲು ಹಾಗೂ MSIL ಸಂಸ್ಥೆಯಿಂದ ಈ ಪ್ರಮಾಣ ಪತ್ರಗಳನ್ನು ಮುದ್ರಿಸಲು ರೂ. 32,00,000/- ಹಾಗೂ ಅನ್ವಯವಾಗುವ ತೆರಿಗೆ ವೆಚ್ಚಗಳನ್ನು ಭರಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.**

ಷಯ ಸಂಖ್ಯೆ: 03

**ವಿಷಯ:** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವದಲ್ಲಿ ಸ್ನಾತಕ ಪದವಿ ಕೋರ್ಸುಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ ಚಿನ್ನದ ಪದಕವನ್ನು ನೀಡುವ ಕುರಿತು.

***

***ಪರಮಾರ್ಶಕ ಟಿಪ್ಪಣಿ***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2018-19ರ ಶೈಕ್ಷಣಿಕ ವರ್ಷದಿಂದ ಕಾರ್ಯಾರಂಭ ಮಾಡಿದ್ದು, 2018-19ರಲ್ಲಿ ವಿವಿಧ ಸ್ನಾತಕ ಪದವಿಗಳಿಗೆ ಸಂಯೋಜಿತ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆದು 2020-21 ರಲ್ಲಿ ಸ್ನಾತಕ ಪದವಿಗಳನ್ನು ಪೂರೈಸಿರುವ ವಿದ್ಯಾರ್ಥಿಗಳಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಥಮ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ ಪ್ರಧಾನ ಮಾಡಲಾಗುವುದು.

ದಿನಾಂಕ 30.11.2020ರ ಹಾಗೂ 09.12.2020ರಂದು ನಡೆದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 9ನೇ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಿಂದ ವಿವಿಧ ಸ್ನಾತಕೋತ್ತರ ಪದವಿಗಳಲ್ಲಿ ಪ್ರಥಮ ರ್‍ಯಾಂಕ್‌ಗಳಿಸಿರುವ ವಿದ್ಯಾರ್ಥಿಗಳಿಗೆ 32 ಚಿನ್ನದ ಪದಕ ನೀಡಲು ತೀರ್ಮಾನವಾಗಿರುತ್ತದೆ.

ಆದ್ದರಿಂದ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದಿಂದ ಪದವಿ ಪೂರೈಸಿರುವ ಸ್ನಾತಕ ಪದವಿ (Under Graduate)ಯ ಕೆಳಕಂಡ ವಿವಿಧ ಕೋರ್ಸುಗಳಲ್ಲಿ ಪ್ರಥಮ ರ್‍ಯಾಂಕ್‌ಗಳಿಸಿರುವ ವಿದ್ಯಾರ್ಥಿಗಳಿಗೂ ಸಹ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವತಿಯಿಂದ ಚಿನ್ನದ ಪದಕ ಸ್ಥಾಪಿಸಲು ವಿಷಯ ಮಂಡಿಸಿದೆ.

ಪ್ರತಿ ಕೋರ್ಸಿಗೆ ಒಂದು ಚಿನ್ನದ ಪದಕ ನೀಡಲು ರೂ.6.00 ಲಕ್ಷಗಳಂತೆ ಒಟ್ಟು **23** ರೂ. 1,38,00,000/-ಗಳನ್ನು ನಗದು ಠೇವಣಿ ಇಡ ಬೇಕಾಗುತ್ತದೆ ಮತ್ತು ಪ್ರಸ್ತುತ ವರ್ಷದ 19 ಕೋರ್ಸುಗಳಿಗೆ ತಲಾ ರೂ.30,000/-ದಂತೆ ಒಟ್ಟು ರೂ. 5,70,000/-ಗಳನ್ನು ನೀಡಲು ವೆಚ್ಚವಾಗುತ್ತದೆ.

| Sl.No. | Degree Type | Degree Description |
|---|---|---|
| 1 | UG | Bachelor of Arts |
| 2 | UG | Bachelor in Audiology and Speech Language Pathology |
| 3 | UG | Bachelor of Business Administration |
| 4 | UG | Bachelor of Business Administration (Aviation Management) |
| 5 | UG | Bachelor of Computer Application |
| 6 | UG | Bachelor of Commerce |
| 7 | UG | Bachelor of Commerce (Honours) |
| 8 | UG | Bachelor of Commerce (Logistics & Supply Chain Management) |
| 9 | UG | Bachelor of Commerce (Office Management and Secretarial Practice) |
| 10 | UG | Bachelor of Commerce (Tourism and Travel Management) |

| | | |
|---|---|---|
| 11 | UG | Bachelor of Vocation (Information Technology) |
| 12 | UG | Bachelor of Vocation (Retail Management) |
| 13 | UG | Bachelor of Science |
| 14 | UG | Bachelor of Science (Fashion and Apparel Design) |
| 15 | UG | Bachelor of Science (Interior Design & Decoration) |
| 16 | UG | Bachelor of Science (Rehabilitation Science) |
| 17 | UG | Bachelor of Social Work |
| 18 | UG | Bachelor of Education (Including 2018-20 Batch) |
| 19 | UG | Bachelor of Physical Education (Including 2018-20 Batch) |

ಕುಲಸಚಿವರು (ಮೌಲ್ಯಮಾಪನ) ರವರು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ಪ್ರಕಾರ 32 ಸ್ನಾತಕೋತ್ತರ ಕೋರ್ಸುಗಳಿಗೆ ಚಿನ್ನದ ಪದಕ ಮತ್ತು ನಗದು ಬಹುಮಾನ ಸ್ಥಾಪಿಸಲು ಪ್ರತಿ ಚಿನ್ನದ ಪದಕಕ್ಕೆ 6.00 ಲಕ್ಷಗಳ ಠೇವಣಿ ಇರಿಸಿ, ಅದರ ಮೇಲೆ ಆಕರವಾಗುವ ಬಡ್ಡಿಯ ಹಣದಿಂದ ಚಿನ್ನದ ಪದಕ ನೀಡಲು ತೀರ್ಮಾನಿಸಲಾಗಿದೆ. ಈಗ ಸ್ನಾತಕ ವಿದ್ಯಾರ್ಥಿಗಳ ತೇರ್ಗಡೆಯಾಗಿ ಪ್ರಥಮ ಶ್ರೇಣಿ ಪಡೆದಿರುವುದರಿಂದ ಅವರಿಗೂ ಸಹ ಚಿನ್ನದ ಪದಕ ನೀಡುವ ವಿಷಯ ಪ್ರಾಸ್ತಾಪಿಸಲಾಗಿದೆ ಎಂದು ತಿಳಿಸಿದರು.

*ವಿವರಣೆ:*

ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ, ಡಾ. ವಿ. ಆರ್. ದೇವರಾಜ್, ಡಾ ಗುರುನಾಥ್‌ರಾವ್ ವೈದ್ಯ, ಡಾ. ಆರ್. ಕೆ. ಚಂದ್ರನಾಥ್, ಶ್ರೀ ಎಂ. ವಿ. ರಂಗಪ್ಪ ರವರು ಚರ್ಚೆಯಲ್ಲಿ ಪಾಲ್ಗೊಂಡು ವಿವಿಧ ಆಯಾಮಗಳ ಕುರಿತು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

**ನಿರ್ಣಯ:**

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ನಿಕಾಯಗಳ ಅಡಿಯಲ್ಲಿ ಬರುವ ಪದವಿ ಕೋರ್ಸುಗಳಲ್ಲಿ ಅತಿ ಹೆಚ್ಚು ಅಂಕ ಪಡೆದು ಪ್ರಥಮ ರ್‍ಯಾಂಕ್‌ಗಳಿಸುವ ವಿದ್ಯಾರ್ಥಿಗಳಿಗೆ ತಲಾ ಒಂದರಂತೆ 4 ಚಿನ್ನದ ಪದಕಗಳು ಮತ್ತು ವ್ಯವಸ್ಥಾಪನಾ (Management) ವ್ಯಾಸಂಗದ ಅಡಿಯಲ್ಲಿ ಬರುವ ಕೋರ್ಸುಗಳಲ್ಲಿ ಒಂದು ಹೆಚ್ಚುವರಿ ಚಿನ್ನದ ಪದಕ ಹೀಗೆ ಒಟ್ಟು 5 ಚಿನ್ನದ ಪದಕಗಳನ್ನು ಸ್ಥಾಪಿಸಲು ಮತ್ತು ಸದರಿ ಚಿನ್ನದ ಪದಕಗಳನ್ನು ಆಯಾ ನಿಕಾಯಗಳ ಕೋರ್ಸುಗಳಲ್ಲಿ ಅತಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗೆ ಚಿನ್ನದ ಪದಕ ಸ್ಥಾಪಿಸಲು ನಿರ್ಣಯಿಸಲಾಯಿತು.**

**ಈ ಐದು ಚಿನ್ನದ ಪದಕಗಳಿಗೆ, ಪ್ರತಿ ಚಿನ್ನದ ಪದಕಕ್ಕೆ ರೂ. 6.00 ಲಕ್ಷಗಳಂತೆ ಒಟ್ಟು ಮೂವತ್ತು ಲಕ್ಷ ರೂಪಾಯಿಗಳ ಠೇವಣಿ ಇಡಲು ಹಾಗೂ ಈ ವರ್ಷದ ಚಿನ್ನದ ಪದಕ ನೀಡಲು, ಪ್ರತಿಯೊಂದಕ್ಕೆ ರೂ. 30,000/– ರಂತೆ 5 ಚಿನ್ನದ ಪದಕ ಹಾಗೂ ನಗದು ಬಹುಮಾನಗಳಿಗೆ ರೂ. 1,50,000/– (ರೂಪಾಯಿ ಒಂದು ಲಕ್ಷ ಐವತ್ತು ಸಾವಿರ ಮಾತ್ರ) ಗಳಿಗೆ ಮಂಜೂರಾತಿ ನೀಡಲು ಸಿಂಡಿಕೇಟ್ ಸಭೆ ನಿರ್ಣಯಿಸಿತು.**

m No: 04 Institution of "Dr. MS Ramaiah Memorial Gold Medal' by the Principal MS Ramaiah College of Arts, Science and Commerce for award during the First Annual Convocation of Bengaluru City University Scheduled on 11th April 2022.

***REFERENCE NOTE***:

In response to the appeal by the University seeking donations for institution of Gold Medals , the Principal, MS Ramaiah College of Arts, Science and Commerce has come forward to institute an Endowment as detailed below for award of Gold Medal from the ensuing First Annual Convocation scheduled to be held on 11th April 2022.

| Name of the Donor | Title of the Gold Medal | Endowment Amount | Mode of payment made |
|---|---|---|---|
| Principal,<br>MS Ramaiah College of Arts, Science and Commerce Bengaluru. | **"Dr. M.S Ramaiah Memorial Gold Medal"** | 6.00 lakhs | DD No.006642 dated. 14.03.2022 |

As per the Statutes, the endowment amount is to be invested in Government securities and Gold Medal / Cash Prize is to be awarded out of the interest accruing thereon. In case the Gold Medal / Cash Prize is to be awarded from the current year, the donor has to pay an additional amount of Rs.30,000/-. Accordingly, the Donor has agreed to pay the additional amount. In such an event the proposed Gold Medal will be awarded from the ensuing Annual Convocation.

The matter is placed before the Syndicate for consideration.

ನಿರ್ಣಯ:

**2020-21 ನೇ ಸಾಲಿನಿಂದ "ಡಾ. ಎಂ. ಎಸ್. ರಾಮಯ್ಯ ಮೆಮೋರಿಯಲ್ ಚಿನ್ನದ ಪದಕ" ಸ್ಥಾಪಿಸಲು ಅನುಮೋದನೆ ನೀಡಲಾಯಿತು.**

ದಾನಿಗಳ ಸೂಚಿಸಿದ ಪ್ರಥಮ ಪ್ರಾಶಸ್ಯದ ಎಂ.ಎಸ್ಸಿ ಸೂಕ್ಷ್ಮಜೀವಶಾಸ್ತ್ರ ವ್ಯಾಸಂಗದ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗೆ ಚಿನ್ನದ ಪದಕ ಹಾಗೂ ನಗದು ಬಹುಮಾನ ನೀಡಲು ಸಭೆ ನಿರ್ಣಯಿಸಿತು.

ಚಿನ್ನದ ಪದಕ ಹಾಗೂ ನಗದು ಬಹುಮಾನಗಳನ್ನು ಸ್ಥಾಪಿಸಲು ಠೇವಣಿ ನೀಡಿ ದತ್ತಿ ನಿಧಿ ಸ್ಥಾಪಿಸಲು ದಾನಿಗಳು ಮುಂದೆ ಬಂದಲ್ಲಿ ಅಂತಹ ಠೇವಣಿಗಳನ್ನು ಸ್ವೀಕರಿಸಿ, ಅಗತ್ಯ ಕ್ರಮ ಕೈಗೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

Item No: 05 Entering into a Memorandum of Understanding (MOU) with Harrisburg University, USA for offering (i) English Language program and (ii) Integrated Undergraduate-Graduate Degree program in Computer Science – reg.

***REFERENCE NOTE***:

Harrisburg University (HU), USA has expressed their intent to work together with Bengaluru City University (BCU) to explore possible educational initiatives in the areas:

(i) English language learning programs and university studies preparations for potentially participating in or attending an American educational program;
(ii) Offering an integrated Undergraduate-Graduate Degree program in Computer Science and / or transfer articulation programs between BCU and HU.

In this connection a letter of intent was signed on 03.01.2022 / January 6,2022 by Vice-Chancellor, BCU and Dr. Eric D Darr, President of HU. Incidentally, Harrisburg University has also signed a letter of intent with the Department of Collegiate & Technical Education, Government of Karnataka.

The Harrisburg University has sent the draft Memorandum of Understanding (MoU) to be signed by the Vice-Chancellor of BCU and President of HU. A copy of the draft Memorandum of Understanding to be signed by both the Universities is enclosed.

The draft Memorandum of Understanding is placed before the Syndicate for its consideration and approval.

*ವಿವರಣೆ:*

ಕುಲಪತಿಗಳು ಹ್ಯಾರಿಸ್‌ಬರ್ಗ್ ವಿಶ್ವವಿದ್ಯಾನಿಲಯದ ಜೊತೆಗೂಡಿ ಕೈಗೊಳ್ಳಬೇಕಾದ ಶೈಕ್ಷಣಿಕ ಕಾರ್ಯಕ್ರಮಗಳ ವಿವರಗಳನ್ನು ಸಭೆಗೆ ತಿಳಿಸಿದರು. ಈ ಒಪ್ಪಂದದ ಪ್ರಕಾರ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳೂ ಸಹ ಭಾಗವಹಿಸಬಹುದು. ಅದರ ವಿಧಿ ವಿಧಾನಗಳನ್ನು ನಂತರದಲ್ಲಿ ಪರಸ್ಪರ ಚರ್ಚಿಸಿ ಅಂತಿಮಗೊಳಿಸಲಾಗುತ್ತದೆ ಎಂದು ತಿಳಿಸಿದರು.

ರಾಷ್ಟ್ರೀಯ, ಅಂತರ ರಾಷ್ಟ್ರೀಯ ಹಾಗೂ ಸ್ಥಳೀಯ, ಸಂಸ್ಥೆ / ವಿಶ್ವವಿದ್ಯಾನಿಲಯಗಳ ಸಹಭಾಗಿತ್ವದಲ್ಲಿ ಶೈಕ್ಷಣಿಕ ಔನ್ನತಿ, ಸಂಶೋದನೆ, Internship ಹೊಂದುವುದು ಅವಶ್ಯಕವಾಗುತ್ತದೆ. NEP- 2020 ರಲ್ಲಿ ಈ ಕುರಿತು ಪ್ರಾಶಸ್ತ್ಯ ನೀಡಿದ್ದು, ವಿಶ್ವವಿದ್ಯಾನಿಯವು ಈ ದಿಕ್ಕಿನಲ್ಲಿ ಈಗಾಗಲೇ ಕಾರ್ಯೋನ್ಮೋಖವಾಗಿದೆ ನಿಗದಿತ ಸಮಯದೊಳಗೆ ಒಡಂಬಡಿಕೆ ಪ್ರಕ್ರಿಯೆಯ ತಿಳಿವಳಿಕೆ ಪತ್ರಗಳಿಗೆ ಸಹಿಹಾಕಿ ಕಾರ್ಯೋನ್ಮೋಖವಾಗಬೇಕಾಗುತ್ತದೆ ಎಂದು ಕುಲಪತಿಗಳು ವಿವರಿಸಿದರು.

ಇದೇ ರೀತಿಯ ಒಡಂಬಡಿಕೆಯ ಪ್ರಸ್ತಾವನೆಗಳು ಇಟಲಿ ದೇಶದ ಕೌನ್ಸಲ್ ಜನರಲ್ ರವರಿಂದ ಹಾಗೂ ಇನ್ನೂ ಕೆಲವು ಹೊರ ದೇಶದ ವಿಶ್ವವಿದ್ಯಾನಿಲಯಗಳಿಂದ ಪ್ರಸ್ತಾವನೆಗಳು ಬಂದಿದ್ದು, ಅವುಗಳಿಗೆ ಸಂಬಂಧಿಸಿದಂತೆ ಪೂರ್ವಭಾವಿ, ಚರ್ಚೆ ಪತ್ರ ವ್ಯವಹಾರ ಹಾಗೂ ಸಿದ್ದತೆಗಳನ್ನು ಮಾಡಿಕೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಿದಲ್ಲಿ, ನಿಗದಿತ ಸಮಯದಲ್ಲಿ ಕೆಲಸ ನಿರ್ವಹಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಕುಲಪತಿಗಳು ಆಸಕ್ತಿವಹಿಸಿ ಶೈಕ್ಷಣಿಕ ಮತ್ತು ಸಂಶೋದನೆಗಳಿಗೆ ಪೂರಕವಾಗಿ ಪಾಲ್ಗೊಳ್ಳುವಿಕೆ, ಸಹಭಾಗಿತ್ವ ಸಮಾಲೋಚನೆಗಳಿಗೆ ಸಂಬಂಧಿಸಿದಂತೆ ವಿಶ್ವದ ಹಲವಾರು ವಿಶ್ವವಿದ್ಯಾಲಯಗಳೊಂದಿಗೆ ಮತ್ತು ಸರ್ಕಾರಿ ಸಂಸ್ಥೆಗಳೊಂದಿಗೆ ಚಿಂತನೆಗಳನ್ನು ಮಾಡಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದೊಂದಿಗೆ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳುವಲ್ಲಿ ತೋರಿಸುತ್ತಿರುವ ಉತ್ಸಾಹಕ್ಕೆ ಸಿಂಡಿಕೇಟ್ ಸಭೆ ಪ್ರಶಂಸೆ ವ್ಯಕ್ತಪಡಿಸಿ ಅಭಿನಂದನೆಗಳನ್ನು ಸಲ್ಲಿಸಿತು.

**ನಿರ್ಣಯ:**

**ಹ್ಯಾರಿಸ್‌ಬರ್ಗ್ ವಿಶ್ವವಿದ್ಯಾಲಯದ ಜೊತೆಗೆ ಬೆಂಗಳೂರು ನಗರ ವಿಶ್ವವಿದ್ಯಾಲಯ ಜೊತೆಗೂಡಿ ನಾಲ್ಕು ವರ್ಷಗಳ ಪದವಿ ಮತ್ತು ಐದು ವರ್ಷಗಳ ಸ್ನಾತಕೋತ್ತರ ವ್ಯಾಸಂಗಗಳನ್ನು ಪರಸ್ಪರ ಶೈಕ್ಷಣಿಕ ವಿನಿಮಯ ಕಾರ್ಯಕ್ರಮಗಳಾಗಿ ಕೈಗೊಳ್ಳಲು ಸಭೆ ಒಪ್ಪಿಗೆ ನೀಡಿ, ಕರಡು ತಿಳುವಳಿಕೆ ಪತ್ರಕ್ಕೆ ಅನುಮೋದನೆ ನೀಡಲಾಯಿತು.**

**ಈ ಕುರಿತು ಅಗತ್ಯ ವಿಧಿ ವಿಧಾನಗಳನ್ನು ನಿರ್ವಹಿಸಲು ಹಾಗೂ ಕಾರ್ಯ ಯೋಜನೆ ರೂಪಿಸಲು ಅನುಮತಿ ನೀಡಲಾಯಿತು. ಇದೇ ರೀತಿಯ ಪ್ರಸ್ತಾವನೆ ಶೈಕ್ಷಣಿಕ ಮತ್ತು ಸಂಶೋಧನೆಗಳಿಗೆ ಸಂಬಂಧಿಸಿದಂತೆ ಬೇರೆ ದೇಶಗಳ ಸರ್ಕಾರ / ವಿಶ್ವವಿದ್ಯಾನಿಲಯಗಳಿಂದ ಬಂದಲ್ಲಿ, ಕುಲಪತಿಗಳು ಅವುಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಂಡು ನಂತರ ಸಿಂಡಿಕೇಟ್ ಸಭೆಗೆ ವರದಿ ಮಾಡಬೇಕೆಂದು ನಿರ್ಣಯಿಸಲಾಯಿತು.**

**ವಿಷಯ ಸಂಖ್ಯೆ: 06**

**ವಿಷಯ:** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಘಟಿಕೋತ್ಸವಕ್ಕೆ ದತ್ತಿ ನಿಧಿ ಸಂಗ್ರಹಕ್ಕೆ ಪ್ರತ್ಯೇಕ ಖಾತೆಯನ್ನು ತೆರೆಯುವ ಬಗ್ಗೆ.

***

***ಪರಮಾರ್ಶಕ ಟಿಪ್ಪಣಿ***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಘಟಿಕೋತ್ಸವಕ್ಕೆ ದತ್ತಿ ನಿಧಿ ಸಂಗ್ರಹಕ್ಕೆ ಪ್ರತ್ಯೇಕ ಖಾತೆಯನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ತೆರೆಯಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಪ್ರದಾನ ಮಾಡುವ ಚಿನ್ನದ ಪದಕ ಹಾಗೂ ನಗದು ಬಹುಮಾನಗಳನ್ನು ಸ್ಥಾಪಿಸಲು ಸ್ವೀಕರಿಸಲಾಗುವ ನಿಧಿಗಳನ್ನು ಸ್ವೀಕರಿಸಲು ಹಾಗೂ ಅವುಗಳನ್ನು ಪರಿನಿಯಮದ ಪ್ರಕಾರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಠೇವಣಿ ಇರಿಸಲು ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

---

ಸಹಿ/–
ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಸಹಿ/–
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ